ಅ) 31,11,004

ಆ) ಕೊಡಗು ಜಿಲ್ಲೆಯಲ್ಲಿರುವ ಕಾರ್ಡುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

	ಹಸಿರು	ಕೇಸರಿ	ಫೋಟೋ ಕಾರ್ಡ್ಸ್
1. ಮಡಿಕೇರಿ	8504	9335	5548
2. ವಿರಾಜಪೇಟೆ	25162	12923	—
3. ಸೋಮವಾರಪೇಟೆ	21818	19716	—
ಒಟ್ಟು	55484	41974	5548

ಇ) ಬಂದಿರುತ್ತದೆ

ಈ) ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ದಿಶೆಯಲ್ಲಿ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಖಾಸಗಿ ಶಾಲೆಗಳಲ್ಲಿರುವ ಡೊನೇಷನ್ ಹಾವಳಿಯನ್ನು ತಡೆಗಟ್ಟುವ ಬಗ್ಗೆ

2837 - ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಈಗಾಗಲೇ ಅನುಮತಿ ಪಡೆದಿರುವ ಖಾಸಗೀ ಶಾಲೆಗಳಲ್ಲಿ ಡೊನೇಷನ್ ಹಾವಳಿಯಿಂದಾಗಿ ತುಂಬೆ-ತಾಯಂದಿರಿಗೆ ಮಕ್ಕಳನ್ನು ಓದಿಸಲು ಅಸಾಧ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಖಾಸಗೀ ಶಾಲೆಗಳಿಗೆ ಅನುಮತಿ ನೀಡುವಾಗ ಈ ಡೊನೇಷನ್ ಬಗ್ಗೆ ನಿರ್ಬಂಧವನ್ನು ಸರ್ಕಾರದವರು ಹೇರದಿರುವುದಕ್ಕೆ ಕಾರಣವೇನು?*

ಇ) *ಈಗಾಲಾದರೂ ಸರ್ಕಾರದವರೂ ಡೊನೇಷನ್ ಹಾಗೂ ಬಿಲ್ಡಿಂಗ್ ಫಂಡ್ ವಸೂಲಾತಿ ಬಗ್ಗೆ ಬಿಗಿ ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇಲ್ಲ

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 27 ಪಿಇಸಿ 85(1) ದಿನಾಂಕ 15-5-85 ರ ಪ್ರಕಾರ ಈ ನಿರ್ಬಂಧವನ್ನು ಹೇರಲಾಗಿದೆ. ಈ ಆದೇಶಕ್ಕೆ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ.

ಇ) ಈ ವಿಚಾರವು ನ್ಯಾಯಾಲಯದಲ್ಲಿರುವ ಕಾರಣ ಈ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.